ಉತ್ತರ

ಅ) ಇಲ್ಲ

ಆ) ತುಮಕೂರು ಜಿಲ್ಲೆಯಲ್ಲಿ ಒಟ್ಟು ೧೦ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಿ ಈ ತಾಲ್ಲೂಕುಗಳಲ್ಲಿ ಬರ ಪರಿಹಾರ ಕಾರ್ಯಕ್ಕೆಗೊಳ್ಳಲು ತುಮಕೂರು ಜಿಲ್ಲೆಗೆ ಒಟ್ಟು ರೂ.೨೦.೦೦ ಕೋಟಿ ಹಣ ಬಿಡುಗಡೆ ಮಾಡಿದೆ. ಈ ಅನುದಾನಕ್ಕೆ ತಕ್ಕಂತೆ ವಿಧಾನ ಸಭೆ ಸದಸ್ಯರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಸಮಿತಿಗಳಿಂದ ಬಂದಿದ್ದ ಕ್ರಿಯಾ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ.

ಇ) ತುಮಕೂರು ಜಿಲ್ಲೆಯಲ್ಲಿ ೧೨೯೮ ಬರಪರಿಹಾರ ಕಾಮಗಾರಿ ಪ್ರಾರಂಭಿಸಿ ೯೨೫ ಕಾಮಗಾರಿಗಳು ಪೂರ್ಣಗೊಂಡು ೩೬೩ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ತುಮಕೂರು ಜಿಲ್ಲೆಯಲ್ಲಿ ಕೈಗೆತ್ತಿಕೊಂಡಿರುವ ಪರಿಹಾರ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಎಲ್ಲ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸೂಚಿಸಿದೆ.

ಈ) ಬರಪರಿಹಾರ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಸಂಪೂರ್ಣಗೊಳಿಸಲು ಜಿಲ್ಲಾ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರತಿ ತಿಂಗಳು ಜಿಲ್ಲೆಗಳಿಗೆ ಭೇಟಿ ನೀಡಿ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸುವಂತೆ ನಿರ್ದೇಶನ ನೀಡಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೫೮ (೧೪೭೧)

ಸದಸ್ಯರ ಹೆಸರು : ಶ್ರೀ ಎಸ್.ಎಸ್.ಪಾಟೀಲ್ (ಮುಂಡರಗಿ)

ಉತ್ತರಿಸುವವರು : ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು)

ಪ್ರಶ್ನೆ

ಅ) ಮುಂಡರಗಿ ತಾಲ್ಲೂಕು ಡಂಬಳ ನೀರಾವರಿ ಕೆರೆಯ ನೂತನ ಬಲದಂಡೆ ಶಾಖಾ ಕಾಲುವೆ ಕೆಲಸ ಪ್ರಾರಂಭವಾದದ್ದು ಯಾವಾಗ ;

ಆ) ಈ ಕಾಲುವೆಯ ಮೂಲ ಅಂದಾಜು ಮೊತ್ತ ಎಷ್ಟಿತ್ತು ಹಾಗೂ ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು ;

ಇ) ಈ ಕಾಲುವೆಯ ಕಾಮಗಾರಿ ಮುಗಿಸಿ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಇನ್ನು ಎಷ್ಟು ವರ್ಷ ಬೇಕಾಗುತ್ತದೆ ;

ಉತ್ತರ

ಅ) ಪ್ರಾರಂಭವಾದ ದಿನಾಂಕ : ೦೧-೧೦-೨೦೦೩

ಆ) ಮೂಲ ಅಂದಾಜು ಮೊತ್ತ ರೂ. ೨೦.೦೦ ಲಕ್ಷ ಇಲ್ಲಿಯವರೆಗೆ ಖರ್ಚಾಗಿರುವ ಮೊತ್ತ ರೂ. ೧೨.೮೪ ಲಕ್ಷ.

ಇ) ಈ ಕಾಲುವೆಯ ಕಾಮಗಾರಿಯನ್ನು ೨೦೦೬ನೇ ಸಾಲಿನ ಅಕ್ಟೋಬರ್ ನಲ್ಲಿ ಪೂರ್ಣಗೊಳಿಸಲಾಗಿದೆ. ಕೆರೆಯಲ್ಲಿ ನೀರು ಸಂಗ್ರಹ ಇಲ್ಲದೇ ಇರುವುದರಿಂದ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿರುವುದಿಲ್ಲ. ಮುಂದಿನ ಮಳೆಗಾಲದಲ್ಲಿ ನೀರು ಸಂಗ್ರಹವಾದಲ್ಲಿ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೫೯ (೨೧೬೮)

ಸದಸ್ಯರ ಹೆಸರು : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ)

ಉತ್ತರಿಸುವವರು : ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಪ್ರಶ್ನೆ

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ನಿರ್ಮಿಸಲು ಅವಶ್ಯವಿರುವ ಜಮೀನನ್ನು ಗುರುತಿಸಲಾಗಿದೆಯೇ ;